ವರ್ಗಾಯಿಸಿ ಮಾರ್ಚ್–2014ರ ಅಂತ್ಯದೊಳಗೆ ಬಳಸಿ ಕೊಳ್ಳಲಾಗುವುದು.

ಕೈಗಾರಿಕಾ ತರಬೇತಿ ಕೇಂದ್ರಗಳು

228(295); ಡಾ: ಉಮೇಶ್ ಜಿ. ಜಾಧವ್(ಚಿಂಚೋಳಿ)

ಅ) ಪ್ರಸಕ್ತ ಸಾಲಿನಲ್ಲಿ ಗುಲ್ಬರ್ಗ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಿಂಚೋಲಿ ಗ್ರಾಮದಲ್ಲಿ ಪಟ್ಟಣದಲ್ಲಿ ಕೊಂಚಾವರಂ ಹಾಗೂ ಕಾಳಗಿಯಲ್ಲಿ ಕೈಗಾರಿಕಾ ತರಬೇತಿ ಕೇಂದ್ರವನ್ನು (ಐಟಿಐ ಕಾಲೇಜ್) ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಚಿಂಚೋಳಿಯಲ್ಲಿ ಈಗಾಗಲೇ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೇ, ಪ್ರಸಕ್ತ ಸಾಲಿನಲ್ಲಿ ಚಿಂಚೋಲಿ ತಾಲ್ಲೂಕಿನ ಕೊಂಚಾವರಂನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

Chincholi has functioning Government Industrival Training Instituite already Moreover, Government has sanctioned an Industrial Training Insituite of Konchavaram. No proposal to set up an Industrial Training Industries before the Government.

ಗುಲ್ಬರ್ಗ ಜಿಲ್ಲೆಯ ಕಾಳಿಗಿಯಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

No proposal to set up an Industrial Training Institutes before the Government at Kalagi, Gulbarga District.

AIBP ಯೋಜನೆಯ ಕಾಮಗಾರಿಗಳು

229 (218); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಬೀದರ್ ಜಿಲ್ಲೆಯಲ್ಲಿನ ಬಸವಕಲ್ಯಾಣ ವ್ಯಾಪ್ತಿಯ ಸಣ್ಣ ನೀರಾವರಿ A.I.B.P. ಯೋಜನೆಯಡಿಯಲ್ಲಿ ಒಟ್ಟು 33 ಕೋಟಿ ಮೊತ್ತಕ್ಕೆ ತಾಂತ್ರಿಕ ಸಲಹಾ ಸಮಿತಿಯಿಂದ ಒಪ್ಪಿಗೆ ಪಡೆಯಲಾಗಿದೆಯೇ;

ಆ) ಅದೇ ರೀತಿ A.I.B.P. ಯೋಜನೆಯಲ್ಲಿ ಇನ್ನೂ ಸುಮಾರು 41 ಕಾಮಗಾರಿ ಅಂದಾಜು 63 ಕೋಟಿ ರೂಪಾಯಿಯ ಪ್ರಸ್ತಾವನೆಯನ್ನು 2014–15ನೇ ಸಾಲಿಗೆ ಸಲ್ಲಿಸಲಾಗಿದೆಯೇ;

ಇ) ಹಾಗಿದ್ದಲ್ಲಿ A.I.B.P. ಯೋಜನೆಗೆ 25 ಪ್ರತಿಶತ ಷೇರ್ ಬಳಸಿ ಈ ಕಾಮಗಾರಿಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿನ ಬಸವಕಲ್ಯಾಣ ಸಣ್ಣ ನೀರಾವರಿ ಉಪವಿಬಾಗ ವ್ಯಾಪ್ತಿಯಲ್ಲಿ A.I.B.P. ಯೋಜನೆಯಲ್ಲಿ ರೂ. 34.27 ಕೋಟಿ ಅಂದಾಜು ವೆಚ್ಚದ 25 ಸಣ್ಣ ನೀರಾವರಿ ಯೋಜನೆಗಳಿಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಿಂದ ಒಪ್ಪಿಗೆ ಪಡೆಯಲಾಗಿದೆ ಹಾಗೂ ಈ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆ. (ಎ.ಐ.ಬಿ.ಪಿ ಬ್ಯಾಚ್–8 ಮತ್ತು 10).